# ಗೊಡ್ಡು ಅರಿಷಿಣದ ಗೆಡ್ಡೆ

ಮಲೆನಾಡಿನ ಅಡಿಕೆ ತೋಟಗಳಲ್ಲಿ ಎಲ್ಲಿ ನೋಡಿದರೂ ನೇರಳೆ ಬಣ್ಣದ ಆಕರ್ಷಕ ಹೂವು ಕಾಣುತ್ತದೆ. ಈ ಹೂವು ‘ಗೊಡ್ಡು ಅರಿಷಣ ಗೆಡ್ಡೆ’ಯದ್ದು. ಮಕ್ಕಳು ಈ ಹೂವನ್ನು ಕಿತ್ತು ಅದರಲ್ಲಿರುವ ನೀರನ್ನು ಎರಚುವ ಆಟವನ್ನೂ ಆಡುತ್ತಾರೆ. ಗಿಡವನ್ನು ಬುಡ ಸಮೇತ ಕಿತ್ತು ಅದರ ಬೇರಿನಲ್ಲಿರುವ ಗೆಡ್ಡೆಯನ್ನು ಸಂಸ್ಕರಿಸಲಾಗುತ್ತದೆ. ಅದರಿಂದ ಗೊಡ್ಡರಿಷಿಣದ ಪುಡಿ ಅಥವಾ ಕೋವಾ ಹಿಟ್ಟಿನ ಪುಡಿಯನ್ನು ಮಲೆನಾಡಿಗರು ತಯಾರಿಸುತ್ತಾರೆ. ಈ ಪುಡಿಯಿಂದ ಆರೋಗ್ಯಕರವಾದ ಮಾಲ್ಟ್‌ನಂಥಾ ಪೇಯ ಹಾಗೂ ರುಚಿಕರವಾದ ಹಲ್ವಾ ಮಾಡಬಹುದು. ಇದು ಬಹಳ ತಂಪೆಂದು ಮನೆಯ ಹಿರಿಯರ ಅಂಬೋಣ.

ಎಚ್.ಎಸ್. ನವೀನಕುಮಾರ್, ಹೊಸದುರ್ಗ





# ಅಪರೂಪದ ಬೇತಾಳ

ಈ ಚಿತ್ರದಲ್ಲಿ ಕಾಣುತ್ತಿರುವುದು ಬೇತಾಳನ ವಿಗ್ರಹ. ಇದು ಹಾಸನದಿಂದ 16 ಕಿ.ಮೀ. ದೂರದಲ್ಲಿರುವ ದೊಡ್ಡಗದ್ದವಳ್ಳಿಯ ಲಕ್ಷ್ಮಿದೇವಿಯ ಗರ್ಭಗುಡಿಯ ಪಕ್ಕದಲ್ಲಿದೆ. ಕಣ್ಣುಗುಡ್ಡೆ ಹೊರಬಂದಂತೆ ತೆರೆದ ಕಣ್ಣು, ಉದ್ದನೆ ಚಾಚಿದ ನಾಲಿಗೆ, ಬಲಗೈಯಲ್ಲಿ ಖಡ್ಗ ಹಾಗೂ ಎಡಗೈಯಲ್ಲಿ ರುಂಡವನ್ನು ಹಿಡಿದು ಈ ವಿಗ್ರಹ ನೋಡಲು ಭಯಂಕರವಾಗಿ ಕಾಣುತ್ತದೆ. ಇದೇ ರೀತಿಯ ವಿಗ್ರಹ ಗರ್ಭಗುಡಿಯ ಮತ್ತೊಂದು ಪಾರ್ಶ್ವದಲ್ಲಿದ್ದು, ಅದರ ಕೈಗಳಲ್ಲಿ ಖಡ್ಗ ಹಾಗೂ ರುಂಡವಿಲ್ಲ. ವಿಶೇಷವೆಂದರೆ ಆ ವಿಗ್ರಹದ ಬಾಯಿಂದ ಹೊಟ್ಟೆಯವರೆಗೆ ರಂಧ್ರವನ್ನು ಕೊರೆಯಲಾಗಿದೆ.

ಕೆ.ಎನ್. ಪ್ರಭಾಕರ ಗುಪ್ತ, ಹಾಸನ

# ಇದು ಸಿಂಗಾಪುರ ಲಾಂಛನ

ಸಿಂಗ್ ಎಂದರೆ ಸಿಂಹ, ಪುರ ಎಂದರೆ ಪಟ್ಟಣ ಎಂಬ ಅನ್ವರ್ಥ ನಾಮ ಹೊಂದಿರುವ ಸಿಂಗಾಪುರ ಸಿಂಹ ತಲೆಯ ಮೀನಿನಾಕಾರದ ದೇಹದ ಲಾಂಛನವನ್ನು ಹೊಂದಿದೆ. 2,500 ಸ್ಕ್ವೈರ್ ಮೀಟರ್ ಸುತ್ತಳತೆಯಲ್ಲಿರುವ ಸಿಂಗಾಪುರದ ಮೇರ್‌ಲೈನ್ (Merlion) ಪಾರ್ಕ್‌ನಲ್ಲಿ ಈ ಲಾಂಚನವಿದೆ. ನೋಡಲು ಆಕರ್ಷಕವಾಗಿರುವ ಇದರ ಬಾಯಿಂದ ರಭಸವಾಗಿ ನೀರು ಚಿಮ್ಮುಸುವ ಆಕರ್ಷಕ ಭಂಗಿ ಪ್ರವಾಸಿಗರ ಆಕರ್ಷಣೆಯ ಕೇಂದ್ರ ಬಿಂದುವಾಗಿದೆ.

ಮಂದಾಕಿನಿ ಪಾಟೀಲ, ವಿಜಯಪುರ

